**ವ್ಯಾಖ್ಯಾನ**

# <u>ಧರ್ಮದ ಪಥವ ಮೆಟ್ಟಲು</u>

**Ref.**: Purandara Chintanaa Lahari by Dr.A.B. Shyamachar, published by Sri Srinivasa Utsava Balaga ®, Bengaluru – 560019, page No. 74.

**ಶ್ರೀ ಪುರಂದರ ದಾಸರ ಉಗಾಭೋಗದ ಚಿಂತನೆ:**

**ಧರ್ಮದ ಪಥವ ಮೆಟ್ಟಲು ಮನವೆರಗದು ದು–**
**ಷ್ಕರ್ಮಕಾದರೆ ಜಿಗಿಜಿಗಿದಾಡುವುದು ಯುಗ–**
**ಧರ್ಮವೊ ಹರಿ ಜೀವನ ಕರ್ಮವೊ**
**ದುರ್ಮಾಯ ಯುಕ್ತಿಗಳಿಂದ ಚರಿಸುವವರ ಮೈಯ**
**ಚರ್ಮವ ಸುಲಿಸದೆ ಬಿಡನು ಪುರಂದರವಿಠಲ ॥**

ಶ್ರೀಪುರಂದರದಾಸರು ಈ ಚಿಕ್ಕ ಉಗಾಭೋಗದಲ್ಲಿ ಧರ್ಮದ ಫಲವೇನು, ಪಾಲಿಸದಿದ್ದಲ್ಲಿ ಆಗುವ ಅನರ್ಥವೇನೆಂಬುದನ್ನು ಮಾರ್ಮಿಕವಾಗಿ ತಿಳಿಸುವರು. ಶ್ರೀವ್ಯಾಸರಾಜರು 'ಸಂತತ ಸನ್ಮಾರ್ಗದಲ್ಲಿ ಇರಬೇಕ, ಪಾತಕವೆಲ್ಲ ಕಳೆಯಲು ಬೇಕು' ಎಂದು ಹೇಳಿದರು. ಅಂದರೆ ಜೀವನದಲ್ಲಿ ಸದಾ ಈ ಎರಡು ಮುಖಗಳನ್ನು ಮುಖ್ಯವಾಗಿಸಿಕೊಂಡಲ್ಲಿ ಜೀವನ ಪಾವನ. ಇದೇ ಧರ್ಮ. ಯಾವದು ಮನುಷ್ಯನನ್ನು ಉನ್ನತಿಗೆ ಕೊಂಡೊಯ್ಯ ಬಲ್ಲದೋ ಅದು ಧರ್ಮ. ಸಾಮಾನ್ಯವಾಗಿ ಸಾಮಾನ್ಯ ಧರ್ಮಗಳನ್ನು ಎಲ್ಲರೂ ಬಲ್ಲಿದವರಾಗಿರುತ್ತಾರೆ. ಆದರೆ ಆಚರಣೆಗೆ ತರುವಲ್ಲಿ ವಿಫಲರಾಗುವರು. ಇದನ್ನೇ ದಾಸರು 'ಧರ್ಮದ ಪಥವ ಮೆಟ್ಟಲು ಮನವೆರಗದು' ಎಂದದ್ದು. ಹೊರ ಆಮಿಷಗಳಿಗೆ ಮನಸೋತು, ಮುಂದಿನ ಗತಿಯನ್ನೂ ಕಲ್ಪಿಸಿಕೊಳ್ಳದೆ, ನಮ್ಮ–ನಮ್ಮವರ–ಇತರರ ಯೋಗಕ್ಷೇಮವನ್ನೂ ಗಮನದಲ್ಲಿರಿಸದೆ ದುಷ್ಕರ್ಮಗಳಿಗೆ ನಾ ಮುಂದೆ–ತಾ ಮುಂದೆ ಎಂದು ಜಿಗಿಜಿಗಿದಾಡುವರು.

ಇನ್ನೊಂದು ಕಡೆ ದಾಸರು 'ತಿಳಿಯದುದೆ ಪಾಪ, ತಿಳಿಯುವುದೆ ಮಹಾಪುಣ್ಯ' ಎಂದರು. ಶಾಸ್ತ್ರಗಳನ್ನು ವ್ಯಾಖ್ಯಾನಗಳು, ವ್ಯಾಸ ದಾಸಸಾಹಿತ್ಯ ಹೀಗೆ ತಿಳಿಯಬಹುದಾದದ್ದು ಅನೇಕವಿದೆ. ಇವುಗಳ

ಆಂತರ್ಯ ತಿಳಿದಲ್ಲಿ ತಿಳಿದು ಪಾಲಿಸಿದಲ್ಲಿ ಧರ್ಮದಿಂದ ಚ್ಯುತರಾಗುವ ಪರಿಸ್ಥಿತಿ ಒದಗದು. ಇದಕ್ಕೆ ಬೇಕಾದದ್ದು ಮನಸ್ಸು ಹಾಗೂ ಪರಿಸರ. ಇದಕ್ಕೆ ದಾಸರು ಶ್ರವಣಾದಿಗಳು ಮೊದಲ ಹೆಜ್ಜೆ ಅನ್ನುವರು. ಉಪದೇಶಕ ಗುರು–ಹಿರಿಯರಿಂದ ತತ್ತ್ವಗಳನ್ನು ತಿಳಿದು, ಸರಿತಪ್ಪುಗಳನ್ನರಿತು ಪಾಲಿಸಿದಲ್ಲಿ ಧರ್ಮದ ಪಥದಲ್ಲಿದ್ದೇವೆಂದು ಭಾವಿಸಬಹುದಾಗಿದೆ. ಸಹಜವಾಗಿ ಧರ್ಮಪಾಲನೆಯಲ್ಲಿ ಕ್ರಮೇಣ ದುಷ್ಕರ್ಮಿಗಳಿಗೆ ಮನ ಮುಂದಾಗದು. ಇದಕ್ಕೆ ವಿರುದ್ಧವಾದಲ್ಲಿ ಮನಸ್ಸು ಕಾಮಕ್ರೋಧಾದಿಗಳಿಗೆ ಆಕರ್ಷಿತವಾಗಿ ನಿಷಿದ್ಧಕರ್ಮಗಳಿಗೆ ಮನಸೋಲುವುದು ಖಚಿತ. ಲಗಾಮು ಇಲ್ಲದ ಕುದುರೆಗಳಂತೆ, ಎತ್ತೆತ್ತಲೋ ಹಾರಾಡುವುದು ನಿಶ್ಚಿತ. ಇಂತಹ ಮನಸ್ಸಿನ ಪ್ರವೃತ್ತಿಯನ್ನು ಕಂಡ ದಾಸರು ಇದು ಯುಗ ಧರ್ಮವೋ ಎಂದು ಸಂಶಯಪಟ್ಟರು.

ಇವರೆ ಒಂದು ಕಡೆ 'ಕಲಿಯುಗದಾ ಮಹಮೆ ಕಾಣ ಬಂದಿದೆ ಈಗ' ಎಂದದ್ದುಂಟು. ಅಥವಾ ಜೀವನ ಅನಾದಿಯಾದ ಕರ್ಮದಿಂದಲೂ ದುಷ್ಕೃತ್ಯಗಳು ನಡೆಯುವುದು ಸಹಜವೋ ಎಂದು ಸಂದೇಹಿಸುವರು. ಜೀವನು ಹಿಂದೆ ಮಾಡಿದ ಕರ್ಮಗಳಿಂದೂ ಇಂದು ಸತ್ಕರ್ಮ–ದುಷ್ಕರ್ಮಗಳಾಗಬಹುದು. ಆದರೆ ಮನುಷ್ಯನ ಪ್ರವೃತ್ತಿ ಮಾತ್ರ ಆಕಡೆಗೆ ವಾಲದೆ ಗುರುಹಿರಿಯರ ಮಾರ್ಗಾವಲಂಬಿಗಳಾಗಬೇಕು. ದಾಸರು ಸಹ 'ಯಾವ ಜನುಮದ ಸುಕೃತ ಬಂದೊದಗಿತೋ' ಎಂದು ಹಾಡಿ ಸಂತಸಗೊಂಡ ಪ್ರಸಂಗಗಳೂ ಸಾಕಷ್ಟನ್ನು ಕಾಣಬಹುದು. ಇವು ಎಲ್ಲರಿಗೂ ಅನ್ವಯಿಸುವ ವಿಷಯಗಳಾಗಿವೆ. ಇಲ್ಲಿ ದಾಸರು ಖಚಿತವಾಗಿ ನಿರೂಪಿಸಿರುವುದನ್ನು ಗಮನದಲ್ಲಿಡಬೇಕು.

ದುಷ್ಟ ಶಾಸ್ತ್ರಗಳನ್ನು ದುರ್ಮತಗಳನ್ನು ದುರ್ಭಾವನೆಗಳನ್ನನುಸರಿಸಿ ಮನುಷ್ಯನು ದುರ್ಬುದ್ಧಿಯಿಂದ ಕೂಡಿದ ಯುಕ್ತಿಗಳಿಂದ ದುಷ್ಕರ್ಮಗಳನ್ನು ಎಸಗಿದಲ್ಲಿ ಶಿಕ್ಷೆ ತಪ್ಪದು ಎಂದರು. ಸಾಕ್ಷಿಯಾಗಿ ಸರ್ವಾಂತಸ್ಥನಾದ ಶ್ರೀಹರಿ ಎಂದಿಗೂ ತಪ್ಪಿತಸ್ಥರನ್ನು, ದುರಾಲೋಚನೆಯಿಂದ ಮಾಡುವ ದುಷ್ಕೃತ್ಯಗಳನ್ನು ಗಮನಿಸಿ ಸೂಕ್ತ ಶಿಕ್ಷೆಯನ್ನು ಕೊಡದಿರನು ಎಂದು ಎಚ್ಚರಿಸಿದರು. ಇಂತಹ ಶಿಕ್ಷೆಗೆ ಒಳಗಾಗದಿರಲು ಹೇಗಿರಬೇಕೆಂಬುದನ್ನು ಪುರಂದರದಾಸರ ಗುರುಗಳಾದ ಶ್ರೀವ್ಯಾಸರಾಜರು ತಮ್ಮ ಕೃತಿಯಲ್ಲಿಯು ಹೀಗೇ ಹೇಳಿದ್ದಾರೆ.

**ಶ್ರೀ ಕೃಷ್ಣಾರ್ಪಣಮಸ್ತು**